**Biocon Foundation**
EMPOWERING COMMUNITIES

# ಹೆಬ್ಬಗೋಡಿ ಕೆರೆ ಪುನರುಜ್ಜೀವನ ಯೋಜನೆ



## ಬಯೋಕಾನ್ ಫೌಂಡೇಶನ್ ಕುರಿತು

ಬಯೋಕಾನ್ ಹಾಗೂ ಸಿಂಜೀನ್ ಇಂಟರ್‌ನ್ಯಾಷನಲ್ ಸಂಸ್ಥೆಗಳು ಸಾಮಾಜಿಕ ಹೊಣೆಗಾರಿಕೆಯನ್ನು ಮೂಲಭೂತ ಆದ್ಯತೆಯಾಗಿ ಪರಿಗಣಿಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ಎಲ್ಲ ಪ್ರಯತ್ನಗಳೂ ಸಹ ನಮ್ಮ ಸಂಸ್ಥೆಯ ಮೂಲ ಸಿದ್ಧಾಂತಗಳಾದ ಸಾಮಾಜಿಕ ಕ್ಷೇಮ, ಆರ್ಥಿಕ ಅಭಿವೃದ್ಧಿ ಹಾಗೂ ಪರಿಸರ ರಕ್ಷಣೆಯ ಅಂಶಗಳನ್ನೂ ಹೊಂದಿರುತ್ತದೆ. ಭಾರತದಲ್ಲಿನ ಹಲವು ಅಭಿವೃದ್ಧಿ ಸವಾಲುಗಳಿಗೆ ಸೂಕ್ತ ಸಮಾಧಾನ ದೊರೆಯುವಲ್ಲಿ ಸಮಾನ ಮನಸ್ಕರು ಕೈಜೋಡಿಸಬೇಕಿದೆ. ಸಮಸಮಾಜದ ಸ್ಥಾಪನೆಯ ಹಾದಿಯಲ್ಲಿರುವ ಈ ಎಲ್ಲ ಸವಾಲುಗಳನ್ನು ಎದುರಿಸುವ ಹಾಗೂ ಸುಸ್ಥಿರ ಅಭಿವೃದ್ಧಿಯ ಹಾದಿಯಲ್ಲಿ ಬೇಕಾದ ಎಲ್ಲ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮವನ್ನು ಮಾಡುವ ಉದಾತ್ತ ಧ್ಯೇಯವನ್ನು ಬಯೋಕಾನ್ ಫೌಂಡೇಶನ್ ಹೊಂದಿದೆ.

## ಹೆಬ್ಬಗೋಡಿ ಕೆರೆಯ ಕುರಿತು

ಹೆಬ್ಬಗೋಡಿ ಕೆರೆಯು 2 ಕಿಲೋಮೀಟರ್ ಸುತ್ತಳತೆ ಇರುವ 35 ಎಕರೆ ವಿಸ್ತೀರ್ಣ ಇರುವ ಕೆರೆಯಾಗಿದೆ. 2 ರಾಜಕಾಲುವೆಗಳಿಂದ ಹಾಗೂ 5 ಬೇರೆ ಮೂಲಗಳಿಂದ ಸ್ಥಳೀಯ ವಸತಿಗಳು ಹಾಗೂ ವಾಣಿಜ್ಯ ಮಳಿಗೆಗಳಿಂದ ಈ ಕೆರೆಗೆ ಕಲ್ಮಷ ಸೇರಿ ಮಾಲಿನ್ಯಗೊಳ್ಳುತ್ತಿದೆ. ತಿರುಪಾಳ್ಯ, ವೀರಸಂದ್ರ ಹಾಗೂ ಶಿಕಾರಿಪಾಳ್ಯ ಕೆರೆಗಳಿಂದ ಈ ಕೆರೆಗೆ ನೀರು ಸೇರುತ್ತದೆ ಹಾಗೂ ಇಲ್ಲಿಂದ ಹೆಚ್ಚಿನ ನೀರು ಸನಿಹದ ಕಮ್ಮಸಂದ್ರ ಕೆರೆಗೆ ಹೋಗುತ್ತದೆ. ಈಗಾಗಲೇ ಚರಂಡಿಯ ಹೊಲಸಿನಿಂದ, ಭಗ್ನವಸ್ತುಗಳಿಂದ ಹಾಗೂ ಘನತ್ಯಾಜ್ಯದಿಂದ ಮಾಲಿನ್ಯಗೊಂಡಿರುವ ಈ ಕೆರೆಯ ಪುನುರುಜ್ಜೀವನಕ್ಕೆ 2016 ಆಗಸ್ಟ್‌ನಿಂದ ಬಯೋಕಾನ್ ಫೌಂಡೇಶನ್ ಪ್ರಯತ್ನ ಮಾಡುತ್ತಿದೆ.








## ವಿಸ್ತೃತ ಯೋಜನಾ ವರದಿ

ಯೋಜನೆ ಅನುಷ್ಠಾನದ ಮುನ್ನ ಸಾಧ್ಯಾಸಾಧ್ಯತೆಯ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಇಲ್ಲಿನ ಪ್ರಾಣಿಪಕ್ಷಿಗಳು, ಗಿಡಮರಗಳು, ಸಾಮಾಜಿಕ ಗುಣಲಕ್ಷಣಗಳು, ಭೂಜಲ ವಿವರಗಳು, ಹವಾಮಾನ ಪರಿಸ್ಥಿತಿ, ಕಲ್ಮಷ ಸೇರುವ ಮುಖ್ಯಸ್ಥಾನಗಳು, ಪ್ರದೇಶದ ಸ್ಥಳಾಕೃತಿ, ವ್ಯವಸ್ಥೆ ಭೌತಿಕ ಅಂಶಗಳು ಹಾಗೂ ಇದರಿಂದ ಪರಿಸರದ ಮೇಲೆ ಹಾಗೂ ಸಮುದಾಯದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಇಲ್ಲಿನ ಮಳೆ ಪರಿಸ್ಥಿತಿ, ಉಷ್ಣಾಂಶ, ನೀರು ಹಾಗೂ ಮಣ್ಣಿನ ಗುಣಮಟ್ಟ ಇತ್ಯಾದಿಗಳನ್ನು ಮೂಲ ನಿಯತಾಂಕಗಳಾಗಿ ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಿಂದ ಹೊರಬಂದ ಅಂಶಗಳ ವಿಶ್ಲೇಷಣೆ ಹಾಗೂ ವ್ಯಾಖ್ಯಾನವು ನಮಗೆ ಯೋಜನೆ ತಯಾರಿಸಲು ಪೂರಕವಾಗಿದೆ. ಇದರ ಆಧಾರದ ಮೇಲೆ ಮಾಡಿರುವ ವಿಸ್ತೃತ ಯೋಜನಾ ವರದಿಯನ್ನು ಕರ್ನಾಟಕ ರಾಜ್ಯ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಪ್ರಾಧಿಕಾರವು ಮಂಜೂರು ಮಾಡಿದೆ.

### ಭಾಗೀದಾರರೊಂದಿಗೆ ತೊಡಗಿಸಿಕೊಳ್ಳುವಿಕೆ

ಯೋಜನೆ ಯಶಸ್ವಿಯಾಗಲು ಬಹುವಲಯ ಒಮ್ಮುಖ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ ಸರ್ಕಾರಿ ವ್ಯವಸ್ಥೆ, ಸ್ಥಳೀಯ ನಿವಾಸಿಗಳು, ಚುನಾಯಿತ ಪ್ರತಿನಿಧಿಗಳು ಮುಂತಾದವರನ್ನು ಒಳಗೊಳ್ಳಲಾಗಿದೆ. 2017 ಅಕ್ಟೋಬರ್‌ನಲ್ಲಿ ಈ ಕೆರೆಯ ಪುನುರುಜ್ಜೀವನಕ್ಕಾಗಿ ಕರ್ನಾಟಕ ಸರ್ಕಾರ ಹಾಗೂ ಬಯೋಕಾನ್ ನಡುವೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ. **ವಿಂಗ್ ಕಮಾಂಡರ್ ಜಿ ಬಿ ಅತ್ರಿ (ನಿ)** ಯವರು ಈ ಯೋಜನೆಯನ್ನು ರೂಪಿಸುವಲ್ಲಿ ಹಾಗೂ ಅನುಷ್ಠಾನಗೊಳಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದಾರೆ. ಬಯೋಕಾನ್ ಸಂಸ್ಥೆಯಲ್ಲಿನ ವಿಷಯ ತಜ್ಞರು ಹಾಗೂ ಕಾರ್ಯಕ್ರಮ ಅನುಷ್ಠಾನ ಮಾಡುವ ತಂಡದವರು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ. ಬಯೋಕಾನ್ ಸಂಸ್ಥೆಯ ಸಿಬ್ಬಂದಿ ಸ್ವಯಂಸೇವಾ ಉಪಕ್ರಮವಾದ ನಮ್ಮ ಬಯೋಕಮ್ಯೂನಿಟಿ ತಂಡದವರೂ ಸಹ ಸಸಿ ನೆಡುವಿಕೆ, ಸ್ವಚ್ಛತೆ ಹಾಗೂ ಕೆರೆಯು ಸುತ್ತಮುತ್ತಲಿನ ಪ್ರದೇಶವನ್ನು ಸುಂದರಗೊಳಿಸುವಲ್ಲಿ ನೆರವಾಗಿದ್ದಾರೆ.


Feasibility Study and Detailed Project Report for Development of Hebbagodi Lake

19th June 2016

Submitted By:
Biocon Foundation

Submitted To:
Chief Executive Officer,
Karnataka Lake Conservation and Development Authority (KLCDA),
Govt. of Karnataka

Prepared By:
Procyon
SustainabilityConsultingDiv., Bangalore
www.procyon.in

**ಸುಸ್ಥಿರ ಹಾಗೂ ಅರೋಗ್ಯಕರ ಪಾರಿಸರಿಕ ವ್ಯವಸ್ಥೆಯ ನಿರ್ಮಾಣದ ಪರಿಕಲ್ಪನೆಯ ಅಡಿಯಲ್ಲಿ ಈ ಪ್ರಯತ್ನ ನಡೆದಿದೆ.**

Biocon Foundation
EMPOWERING COMMUNITIES

ಹೆಬ್ಬಗೋಡಿ ಕೆರೆ
ಪುನುರುಜ್ಜೀವನ ಯೋಜನೆ

## ಆರಂಭಿಕ ಕ್ರಮಗಳು

ಮೊದಲಿಗೆ ಕೆರೆಯ ತಳಭಾಗದಿಂದ ಅಗೆದು ಈಗಾಗಲೇ ಕೆರೆಯಲ್ಲಿ ಹುದುಗಿದ್ದ ಕಳೆ, ಕಲ್ಮಶ ಹಾಗೂ ರೊಚ್ಚನ್ನು ತೆಗೆಯಲಾಯಿತು. ಇಲ್ಲಿಂದ ಹೊರಬಂದ ಕಳೆಯನ್ನು ಕೆರೆಯ ಸುತ್ತಮುತ್ತ ಗಿಡ ನೆಡುವಲ್ಲಿ ಗೊಬ್ಬರದಂತೆ ಬಳಸಿಕೊಳ್ಳಲಾಗಿದೆ. ಜಾಲರಿ ಪರದೆಯನ್ನು ಅಳವಡಿಸುವ ಮೂಲಕ ಹರಿದು ಬರುತ್ತಿರುವ ಚರಂಡಿನೀರಿನಿಂದ ಕಲ್ಮಷವನ್ನು ಬೇರ್ಪಡಿಸಲಾಯಿತು. ಕಸ ಚೆಲ್ಲುವಿಕೆ ಹಾಗೂ ದುರ್ವಾಸನೆಯ ನಿಯಂತ್ರಣಕ್ಕೆ ಮುಚ್ಚಿದ ಅಂತರ್ಭೂಮಿ ಮಾರ್ಗಗಳನ್ನು ರಚಿಸಲಾಯಿತು. ಚರಂಡಿನೀರು ಹೊರಹರಿಯದಂತೆ ಕಲ್ವರ್ಟುಗಳನ್ನು ರಚಿಸಲಾಯಿತು.



## ಒಡ್ಡು ಕಟ್ಟುವಿಕೆ ಹಾಗೂ ಬೇಲಿ ಹಾಕುವಿಕೆ

ಕೆರೆ ಒಟ್ಟು 2 ಕಿಲೋಮೀಟರ್‌ವರೆಗೆ ಸುತ್ತಳತೆ ಹೊಂದಿದ್ದರೂ ಕೇವಲ 600 ಮೀಟರ್‌ವರೆಗೆ ಮಾತ್ರ ಒಡ್ಡು ಲಭ್ಯವಿತ್ತು. ಕೆರೆಯ ನೀರು ಅಂಚಿನವರೆಗೆ ಬಂದು ನಿಜವಾಗಿಯೂ ಕೆರೆಯ ಅಂಚು ತಿಳಿಯಲು ಕಷ್ಟವಾಗುತ್ತಿತ್ತು. ಹೀಗಾಗಿ ಹೆಚ್ಚು ನೀರನ್ನು ಹಿಡಿದಿಡುವ ಸಲುವಾಗಿ ಹಾಗೂ ಪಾದಚಾರಿ ಮಾರ್ಗಕ್ಕಾಗಿ ಉಳಿದ ಭಾಗಕ್ಕೆ ಒಡ್ಡು ರಚಿಸಲಾಯಿತು. ನೀರನ್ನು ಸ್ವಚ್ಛಗೊಳಿಸುವ ಹಾಗೂ ಮಣ್ಣಿನ ಸವಕಳಿ ತಡೆಯಲು ಪೂರಕವಾಗುವಂತೆ ಸ್ಥಳೀಯ ತಳಿಯಾದ ವೆಟ್ಟಿವರ್ ಬಳಸಲಾಯಿತು. 1.5 ಕಿ ಮೀ ಒಡ್ಡು ಕಟ್ಟಲು 67000 ಮೆಟ್ರಿಕ್ ಮಣ್ಣು ಬಳಸಲಾಯಿತು. ಕೆರೆಯ ಪರಿಸರ ಉಳಿಸುವ ಸಲುವಾಗಿ ಇಡೀ ಕೆರೆಯ ಸುತ್ತಳತೆಗೆ ಬೇಲಿ ನಿರ್ಮಾಣ ಮಾಡಲಾಯಿತು. ಎಲ್ ಇ ಡಿ ದೀಪಗಳನ್ನು ಅಳವಡಿಸಿರುವುದರಿಂದ ಇಡೀ ಪ್ರದೇಶ ಸುಂದರವಾಗಿ ಈಗ ಕಂಗೊಳಿಸುತ್ತಿದೆ.





# ಜೈವಿಕಪರಿಹಾರ

## ಜೈವಿಕ–ಕಿಣ್ವ ಚಿಕಿತ್ಸೆ

ಸಾವಯವ ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ಪರಿವರ್ತಿಸುವ ಸಲುವಾಗಿ ಕಿಣ್ವ ಹಾಗೂ ಪರಿಸರಸ್ನೇಹಿ ಸೂಕ್ಷ್ಮಜೀವಿಗಳ ಮಿಶ್ರಣವನ್ನು ಬಳಸಲಾಯಿತು. ಇದರಿಂದಾಗಿ ಈಗಾಗಲೇ ನಿರುಪದ್ರವಿಯಾಗಿರುವ ವಸ್ತುಗಳು ಮತ್ತಷ್ಟು ಬಲಹೀನವಾಗುತ್ತವೆ. ಸಂಸ್ಥೆಯೊಳಗೆ ಇದಕ್ಕೆ ಬೇಕಾದ ಯಂತ್ರವೊಂದರ ರಚನೆ ಮಾಡಿ ದಿನಕ್ಕೆ 3000 ಲೀಟರ್ ಕಿಣ್ವಗಳ ಉತ್ಪಾದನೆ ಮಾಡಿ ಅಂತರ್ಭೂಮಿ ಮಾರ್ಗದೊಳಗೆ ಹರಿಯಬಿಡಲಾಗುತ್ತದೆ.



## ಯಾಂತ್ರಿಕ ವಾಯುಪೂರಕಗಳು

ನೀರಿನೊಳಗೆ ಆಮ್ಲಜನಕವನ್ನು ಹೆಚ್ಚಿಸುವ ಸಲುವಾಗಿ ಇಂಧನದಕ್ಷ ವಾಯುಪೂರಕಗಳನ್ನು ಬಳಸಲಾಗಿದೆ. ಭೂಮಿಯೊಳಗಣ ಯಂತ್ರಗಳನ್ನು ಬಳಸಿ ಈಗಾಗಲೇ ಕೆರೆಯೊಳಗೆ ಶೇಖರಣೆಗೊಂಡ ಹೂಳನ್ನು ತೆಗೆದು, ನೀರಿನೊಳಗಡೆ ಆಮ್ಲಜನಕ ಪ್ರಸಾರ ಹಾಗು ಕೆರೆಯೊಳಗೆ ಹೆಚ್ಚು ನೀರನ್ನು ಶೇಖರಿಸಿಟ್ಟುಕೊಳ್ಳಲು ಸಾಧ್ಯವಾಗುವಂತೆ ಮಾಡಲಾಗಿದೆ.





## ಕೃತಕ ತೇಲುವ ದ್ವೀಪಗಳು

ಈಗಾಗಲೇ ಉಪಯೋಗಿಸಿದ ವಸ್ತುಗಳನ್ನು ಬಳಸಿ ತೆಪ್ಪದಂತಹ ವ್ಯವಸ್ಥೆಯೊಂದನ್ನು ಮಾಡಲಾಗಿದೆ. ಪಿವಿಸಿ ವಸ್ತುಗಳನ್ನು ಈ ಕಾರಣಕ್ಕೆ ಬಳಸಿಕೊಳ್ಳಲಾಗಿದೆ. ಇವುಗಳಿಂದಾಗಿ ಈಗಾಗಲೇ ನೀರಿನಲ್ಲಿರುವ ಅಪಾಯಕಾರಿ ಸೂಕ್ಷ್ಮಜೀವಿಗಳನ್ನು ನಿಷ್ಕ್ರಿಯಗೊಳಿಸುತ್ತದೆ ಹಾಗೂ ಮಾಲಿನ್ಯಗೊಂಡ ನೀರನ್ನು ಜೈವಿಕವಾಗಿ ಪರಿಹರಿಸುತ್ತದೆ.



## ನೀರಿನ ಗುಣಮಟ್ಟದ ಸುಧಾರಣೆ

ನೀರಿನಲ್ಲಿನ ಆಮ್ಲತೆ ಹಾಗೂ ಕ್ಷಾರೀಯತೆಯನ್ನು 6.5–8.5ರೊಳಗೆ ಇರುವಂತೆ ನಿರ್ವಹಿಸಲಾಗಿದೆ. ನೀರಿನಲ್ಲಿ ಇಂಗಾಲದ ಅಂಶ ಸಿ ಒ ಡಿ ಹಾಗೂ ಬಿ ಒ ಡಿ ಗಳ ಮಟ್ಟ ಕಡಿಮೆಯಾಗಿರುವುದನ್ನು ಗಮನಿಸಿದರೆ ನೀರಿನಲ್ಲಿ ಸಾವಯವ ಮಾಲಿನ್ಯಕಾರಕಗಳು ಕಡಿಮೆಯಾಗಿವೆ ಎಂಬುದು ಗೋಚರವಾಗುತ್ತದೆ. ನೀರಿನಲ್ಲಿ ಆಮ್ಲಜನಕದ ಮಟ್ಟ ಶೂನ್ಯದಿಂದ 2.8ರವರೆಗೆ ಏರಿರುವುದನ್ನು ಸಹ ನಾವು ಗಮನಿಸಬಹುದು.

ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ದಾಖಲಿಸಿರುವಂತೆ ಇದು (ಕೃತಕ ತೇಲುವ ದ್ವೀಪಗಳು) ಭಾರತದ ಕೆರೆಯೊಂದರಲ್ಲಿ ನಿರ್ಮಿಸಿರುವ ಅತಿ ದೊಡ್ಡದ್ದಾಗಿದೆ (ಸುಮಾರು 12000 ಚದರಡಿ).

Biocon Foundation
EMPOWERING COMMUNITIES

## ಹಸಿರು ಕ್ಷೇತ್ರ ಅಭಿವೃದ್ಧಿ

ಈ ಪ್ರದೇಶದಲ್ಲಿ ಜೀವ ವೈವಿಧ್ಯವನ್ನು, ಎಂದರೆ ಪ್ರಾಣಿಪಕ್ಷಿಗಳು, ಕೀಟಗಳು, ಜಲಚರಗಳ ರಕ್ಷಣೆಗಾಗಿ ಕೆರೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ವಿಷಯತಜ್ಞರ ಸಲಹೆ ಪಡೆದುಕೊಳ್ಳಲಾಗಿದೆ. ಕೆರೆಯ ಸುತ್ತಮುತ್ತ ನೈಸರ್ಗಿಕ ವಾತಾವರಣವೊಂದನ್ನು ಸೃಷ್ಟಿಸುವ ದೆಸೆಯಲ್ಲಿ ಸ್ಥಳೀಯ ಗಿಡಮರಗಳು, ಔಷಧಿ ಸಸ್ಯಗಳು ಮುಂತಾದವನ್ನು ಬಳಸಿಕೊಳ್ಳಲಾಗಿದೆ.

## ಸಾರ್ವಜನಿಕ ಸೌಕರ್ಯಗಳು

ಕೆರೆಯ ಸುತ್ತಮುತ್ತ ಮಕ್ಕಳ ಉದ್ಯಾನ ಹಾಗೂ ದೈಹಿಕ ಚಟುವಟಿಕೆಗಾಗಿ ನಡಿಗೆಯ ಪಥವೊಂದನ್ನು ನಿರ್ಮಿಸಲಾಗಿದೆ. ಇಲ್ಲಿಗೆ ಬರುವ ಸಾರ್ವಜನಿಕರ ಅನುಕೂಲಕ್ಕಾಗಿ ಶುದ್ಧೀಕರಿಸಿದ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲಾಗಿದೆ. ಪರಿಣಾಮಕಾರಿ ತ್ಯಾಜ್ಯ ನಿರ್ವಹಣೆಗಾಗಿ ತ್ಯಾಜ್ಯ ವಿಂಗಡಣಾ ಘಟಕವನ್ನು ನಿರ್ಮಿಸಲಾಗಿದೆ.













## ಮುಂದಿನ ಹೆಜ್ಜೆಗಳು

ಈ ಪಾರಿಸರಿಕ ಉಪಕ್ರಮವು ಯಶಸ್ವಿಯಾಗಲು ಸರ್ಕಾರದ ಬೆಂಬಲ ಹಾಗೂ ಮುಖ್ಯ ಭಾಗೀದಾರರ ಸಹಕಾರದ ಅಮೂಲ್ಯ ಕೊಡುಗೆಯಿದೆ. ಮುಂದೆ ಇದೇ ರೀತಿಯ ಉಪಕ್ರಮಗಳನ್ನು ನಾವು ತೆಗೆದುಕೊಂಡರೆ ಇಲ್ಲಿನ ಕಲಿಕೆಗಳು ಹಾಗೂ ಅನುಭವಗಳು ಬಹಳ ಉಪಯೋಗವಾಗುತ್ತವೆ ಹಾಗೂ ಇನ್ನಷ್ಟು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುತ್ತವೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಮುಟ್ಟುವ ದೆಸೆಯಲ್ಲಿ ಬಯೋಕಾನ್ ಫೌಂಡೇಶನ್ ಮುಂದೆಯೂ ಸಹ ಅದೇ ಬದ್ಧತೆಯಿಂದ ಸಾಮಾಜಿಕ, ಆರ್ಥಿಕ ಹಾಗೂ ಪಾರಿಸರಿಕ ವಿಷಯಗಳಲ್ಲಿ ಕೆಲಸ ಮಾಡುತ್ತದೆ.



ಹೆಬ್ಬಗೋಡಿ ಕೆರೆ
ಪುನುರುಜ್ಜೀವನ ಯೋಜನೆ

## ಪುನುರುಜ್ಜೀವನದ ಮುನ್ನ









## ಪುನುರುಜ್ಜೀವನದ ನಂತರ

Biocon Foundation

EMPOWERING COMMUNITIES



**BIOCON FOUNDATION**
20th KM, Hosur Road, Electronic City,
Bengaluru 560100, INDIA
www.bioconfoundation.org
+91 80 2808 2808
info.bioconfoundation@biocon.com
www.facebook.com/BioconFoundation
www.twitter.com/biocon_fdn